ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ
ಸಿ.ಸಿ. 288/2013

| | | | | |
|---|---|---|---|---|
| ಸಾಕ್ಷಿಯ ಹೆಸರು | : ಜಿ.ಎನ್ ರಮೇಶ್ | ಪ್ರಾ ಸಾ | : | 05 |
| ತಂದೆ/ಗಂಡನ ಹೆಸರು | : ಪಿ. ನರಸಿಂಹಯ್ಯ | ಚಾ ಸಾ | : | 08 |
| ವಯಸ್ಸು | : 53 ವರ್ಷ | | | |
| ವೃತ್ತಿ | : ಪಿ.ಐ, ಅಶೋಕಪುರಂ ಪೋಲಿಸ್ ಠಾಣೆ, ಮೈಸೂರು | | | |
| ವಾಸಸ್ಥಳ | : ಮೈಸೂರು | | | |

ಸಾಕ್ಷಿಗೆ ದಿನಾಂಕಃ 16.03.2023 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎ ಪಿ ಪಿ ರವರಿಂದ

ನಾನು **2011-12** ನೇ ಸಾಲಿನಲ್ಲಿ ಕಾನೂನು ಸುವ್ಯವಸ್ಥೆ ಉಪನಿರೀಕ್ಷಕನಾಗಿ ಶ್ರೀರಂಗಪಟ್ಟಣ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೆನು.

ದಿ. 24.01.2012 ರಂದು ಈ ಕೇಸಿನ ಕತಡವನ್ನು ಚಾ ಸಾ 7 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಈ ಕೇಸಿನ ಗಾಯಾಳುವಾದ ಚಾ ಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ದಿ. 25.01.2012 ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು ಅದೇ ದಿನ ಆರೋಪಿತನ ವಿರುದ್ದ ಆರೋಪ ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾ.ಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಗಾಯದ ಪ್ರಮಾಣ ಪತ್ರವನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ನಿವೇದನೆಯನ್ನು ನೀಡಿರುವ ಬಗ್ಗೆ ನೆನಪಿರುವುದಿಲ್ಲ. ನಾನು ಯಾವುದೇ ನಿವೇದನೆ ನೀಡಿಲ್ಲ, ಗಾಯದ ಪ್ರಮಾಣ ಪತ್ರ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ದೂರುದಾರರ ಜೊತೆ ಶಾಮೀಲಾಗಿ ವೈದ್ಯರಿಗೆ ಸೂಚನೆ ನೀಡಿದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳಿಗೂ ಮತ್ತು ದೂರಿನಲ್ಲಿ ಹೇಳಿರುವ ಸಂಗತಿಗಳು ಸಾಮ್ಯತೆ ಇಲ್ಲದೆ ಇದ್ದರೂ ನಾನು ಸೂಕ್ತ ತನಿಖೆ ನಡೆಸದೆ ದೂರುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ದೋ.ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.